***CC.1035/2019***
***CW.2***
***PW.2***

## ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ ಕುಣಿಗಲ್

**ಸಿ.ಸಿ. ನಂ. 1035/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚನ್ನವೀರಗೌಡ | ಪಿ.ಡಬ್ಲ್ಯೂ–2 |
| ತಂದೆಯ ಹೆಸರು | : | ಲೇ. ರುದ್ರೇಗೌಡ | ಸಿ.ಡಬ್ಲ್ಯೂ–2 |
| ವಯಸ್ಸು | : | 48 ವರ್ಷ | |
| ಉದ್ಯೋಗ | : | ಕೆ.ಎಸ್.ಆರ್.ಟಿ.ಸಿ. ಬಸ್ ನಿರ್ವಾಹಕ | |
| ವಾಸಸ್ಥಳ | : | ಕುಣಿಗಲ್ | |

**ಸಾಕ್ಷಿಗೆ ದಿನಾಂಕಃ 30.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿತರನ್ನು ನಾನು ನೋಡಿರುತ್ತೇನೆ. 3 ನೇ ಆರೋಪಿ ಗೈರು ಹಾಜರಿದ್ದು , ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ದಿನಾಂಕಃ 23.07.2019 ರಂದು ಯಡವಾಣಿಯಿಂದ ಅಮೃತೂರಿಗೆ ಬರುವ ದಾರಿಯಲ್ಲಿ ಕುಣಿಗಲ್ ಟೌನ್ ನ ಸಿವಿಲ್ ಬಸ್ ನಿಲ್ದಾಣದ ಬಳಿ ಪ್ರಯಾಣಿಕರನ್ನು ಇಳಿಸಿ ಸ್ವಲ್ಪ ಮುಂದೆ ಕರ್ನಾಟಕ ಸ್ಟೀಲ್ ಅಂಗಡಿಯ ಮುಂದೆ ಬೆಳಿಗ್ಗೆ 7.30 ರ ಸಮಯದಲ್ಲಿ ಬರುವಾಗ, 2 ನೇ ಆರೋಪಿ ರಸ್ತೆಯಲ್ಲಿ ಎಂ.ಎಂ.ಬಸ್ ನ ಚಾಲಕನ ಜೊತೆ ಮಾತನಾಡುತ್ತಿದ್ದರು. ಆಗ ಚಾಸಾ.1 ರವರು ಜಾಗ ಕೇಳಿ ಹಾರ್ನ್ ಮಾಡಿದಾಗ, ಸ್ವಲ್ಪ ಹೊತ್ತಿನ ನಂತರ ಅವರ ಬಸ್ಸನ್ನು

ತೆಗೆದರು. ನಂತರ 2 ನೇ ಆರೋಪಿ ಚಾಸಾ.1 ರವರಿಗೆ ನಿಮ್ಮದು ಜಾಸ್ತಿಯಾಯಿತು, ಸೂಳೇ ಮಗನೇ ಬೋಳಿ ಮಗನೇ ಎಂದು ಬೈದರು. ಆಗ ಚಾಸಾ.1, ಏಕೆ ಬೈಯುತ್ತಿಯಾ ಎಂದು ಬಸ್ಸಿನಿಂದ ಕೆಳಗೆ ಇಳಿದು ಕೇಳಿದಾಗ 2 ನೇ ಆರೋಪಿ ಚಾಸಾ.1 ರವರಿಗೆ ಕಿವಿಗೆ, ಹೊಟ್ಟೆಗೆ, ಎದೆಗೆ ಹೊಡೆದರು. ಆಗ 1 ನೇ ಆರೋಪಿ ಮತ್ತು ಇನ್ನಿಬ್ಬರು ಆಸಾಮಿಗಳು ಬಂದು ಚಾಸಾ.1 ರವರನ್ನು ಕೆಳಕ್ಕೆ ಬಿಳಿಸಿ ಕಾಲಿನಿಂದ ಒದ್ದರು. ಅಷ್ಟರಲ್ಲಿ ಜನರು ಜಗಳ ಬಿಡಿಸಿರುತ್ತಾರೆ. ನಂತರ 1 ಮತ್ತು 2 ನೇ ಆರೋಪಿತರನ್ನು ನಮ್ಮ ಬಸ್ ನಲ್ಲಿಯೇ ಹತ್ತಿಸಿಕೊಂಡು ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ನಂತರ ಚಾಸಾ.1 ರವರು ದೂರು ನೀಡಿರುತ್ತೇನೆ. ನಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

( ಈ ಹಂತರದಲ್ಲಿ ಮಾನ್ಯ ಸ. ಸ. ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

## ಪಾಟೀಸವಾಲುಃ ಮಾನ್ಯ ಎಪಿಪಿ ರವರಿಂದಃ

ಘಟನೆಯ ಸಮಯದಲ್ಲಿ ಎಂ.ಎಂ.ಟ್ರಾವೇಲ್ಸ್ ನ ವಾಹನ ರಸ್ತೆಯ ಬಲಬದಿಯಲ್ಲಿ ನಿಂತಿತ್ತು ಎಂದರೆ ಸಾಕ್ಷಿಯು ಸರ್ವಿಸ್ ರಸ್ತೆಯಲ್ಲಿ ನಿಂತಿತ್ತು ಎಂದು ನುಡಿಯುತ್ತಾರೆ. ಚಾಸಾ.1 ರವರ ಆರ್ನ್ ಮಾಡಿದಾಗ ಬಸ್ಸಿನವರು ಜಾಗ ಕೊಡಲಿಲ್ಲ ಎಂದರೆ ಸರಿ. ಆರೋಪಿತರು ಚಾಸಾ.1 ರವರನ್ನು ಕೊರಳ ಪಟ್ಟಿ ಹಿಡಿದು, ಬಸ್ಸಿನಿಂದ

ಕೆಳಗೆ ಎಳೆದು ಕಪಾಳಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ಆ ರೀತಿ ಗಲಾಟೆ ಮಾಡಿದ ಕಾರಣ, ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದರೆ ಸರಿ. ಸದರಿ ನಮ್ಮ ಬಸ್ ಸಂಖ್ಯೆಕೆಎ–06–ಎಫ್–964 ಆಗಿತ್ತು ಎಂದರೆ ಸರಿ.

**ಪಾಟೀ ಸವಾಲುಃಆರೋಪಿಪರ ಶ್ರೀ.ಕೆ.ಎನ್.ಆರ್. ವಕೀಲರಿಂದಃ–**

ನಾನು 8 ವರ್ಷಗಳಿಂದ ಇಲ್ಲಿಯವರೆಗೆ ಕೆ.ಎಸ್.ಆರ್.ಟಿ.ಸಿ. ಬಸ್ ನಿರ್ವಾಹಕನಾಗಿ ಕುಣಿಗಲ್ ಡಿಪೋದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಘಟನಾ ದಿನದಂದು ನಮ್ಮ ಕರ್ತವ್ಯ ರೂಟ್ ನಂ.13 ಮತ್ತು 14 ರಲ್ಲಿ ಇತ್ತು. ನಾವು 23.07.2019 ರಂದು ಬೆಳಿಗ್ಗೆ 6.00 ಗಂಟೆಗೆ ಯಡವಾಣಿಯಿಂದ ಹೊರಟಿದ್ದೆವು. ನಮ್ಮ ಬಸ್ಸಿನಲ್ಲಿ ಸೀಟಿಂಗ್ ಕೆಪಾಸಿಟಿ 54+1 ಇರುತ್ತದೆ. ಸದರಿ ದಿನದಂದು ನಮ್ಮ ಬಸ್ ನಲ್ಲಿ ಸೀಟಿಂಗ್ ಕೆಪಾಸಿಟಿ ಮುಗಿದು 8-10 ಜನರು ನಿಂತು ಪ್ರಯಾಣ ಮಾಡುತ್ತಿದ್ದರು. ನಮ್ಮ ಬಸ್ ಕುಣಿಗಲ್ ಗೆ 7.20 ಆಗಿತ್ತು. ನಮ್ಮ ಬಸ್ ಗೆ ನಿಲ್ದಾಣ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ನಿಲುಗಡೆ ಸ್ಥಳ ಎಂದರೆ ಸಾಕ್ಷಿಯು ಇಳಿಯುವ ಜನರನ್ನು ಇಳಿಸಬೇಕಾದ ಕಾರಣ ಇಳಿಸಬೇಕಲ್ಲ ಎಂದು ನುಡಿಯುತ್ತಾರೆ. ಕುಣಿಗಲ್ ಖಾಸಗಿ ಬಸ್ ನಿಲ್ದಾಣಕ್ಕೆ ನಮ್ಮ ಬಸ್ ಗೆ ನಿಲುಗಡೆಯ ಸ್ಥಳ ಎಂದು ನಾಮಫಲಕ ಇಲ್ಲ. ನಮ್ಮ ಬಸ್ ನೇರವಾಗಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ನಿಲುಗಡೆಗೆ ಹೋಗಬೇಕು. ಸದರಿ ದಿನದಂದು ಸುಮಾರು ಪ್ರಯಾಣಿಕರು ಖಾಸಗಿ ಬಸ್ ನಿಲ್ದಾಣದಲ್ಲೇ ಇಳಿದಿದ್ದು, ಉಳಿದ 10-12 ಜನ ಸರ್ಕಾರಿ ಬಸ್ ನಿಲ್ದಾಣಕ್ಕೆ ಹೋಗಲು

ಇದ್ದರು. ಖಾಸಗಿ ಬಸ್ ನಿಲ್ದಾಣಕ್ಕೂ ಕರ್ನಾಟಕ ಸ್ಟೀಲ್ ಅಂಗಡಿಗೂ ಸುಮಾರು 40-50 ಅಡಿ ಅಂತರವಿದೆ. ಖಾಸಗಿ ಬಸ್ ನಿಲ್ದಾಣಕ್ಕೂ ಕರ್ನಾಟಕ ಸ್ಟೀಲ್ ಅಂಗಡಿಗೂ ಸುಮಾರು 500 ಮೀಟರ್ ಅಡಿ ಅಂತರವಿದೆ ಎಂದರೆ ಸರಿಯಲ್ಲ. ನನಗೆ ಮತ್ತು ಚಾಸಾ.1 ರವರಿಗೆ ಕರ್ತವ್ಯಕ್ಕೆ ನಿಯೋಜಿಸಿದ ಬಗ್ಗೆ ಲಾಗ್ ಬುಕ್ ನಲ್ಲಿ ಎಂಟ್ರಿ ಇದೆ. ಎಂ ಎಂ ಬಸ್ ಸರ್ವಿಸ್ ರಸ್ತೆಯಲ್ಲಿ ನಿಂತಿತ್ತು ಎಂದರೆ ಸರಿ. ಎಂ ಎಂ ಬಸ್ ಸರ್ವಿಸ್ ರಸ್ತೆಯಲ್ಲಿ ನಿಂತಿದ್ದ ಕಾರಣ, ನಮ್ಮ ಬಸ್ ಬಂದಾಗ ಹೋಗಲು ಜಾಗವಿತ್ತು ಎಂದರೆ ಸಾಕ್ಷಿಯು ಅದು ರಸ್ತೆ ಮಧ್ಯೆ ನಿಂತಿತ್ತು ಎಂದು ನುಡಿಯುತ್ತಾರೆ. ನಮ್ಮ ಬಸ್ ಬರುವ ಮೊದಲು ಅಲ್ಲಿ ಯಾವುದೇ ಟ್ರಾಫಿಕ್ ಜಾಮ್ ಆಗಿರಲಿಲ್ಲ ಎಂದರೆ ಸರಿ. ನಾನು ಉಳಿಕೆ ಪ್ರಯಾಣಿಕರನ್ನು ಇಳಿಸಬೇಕೆಂದು ಬಸ್ ನ ಹಿಂಭಾಗಿಲಿನಲ್ಲಿ ಇದ್ದೆ. ನಾನು ಹಿಂಭಾಗದಲ್ಲಿ ಇದ್ದ ಕಾರಣ, ಬಸ್ ನ ಬಲಭಾಗದ ಮುಂಭಾಗದಲ್ಲಿ ಏನು ಆಗುತ್ತದೆ ಎಂದು ಕಾಣುವುದಿಲ್ಲ ಎಂದರೆ ಸರಿ. ಚಾಸಾ.1 ರವರು ಚಾಲಕನ ಜಾಗದಲ್ಲಿ ಕುಳಿತಿದ್ದರು ಎಂದರೆ ಸರಿ. ಚಾಸಾ.1 ರವರ ಚಾಲಕನ ಸೀಟಿನ ಹಿಂಭಾಗದಲ್ಲಿ ಗ್ರಿಲ್ ಮಾಡಿದ ಶೀಟ್ ಇರುತ್ತದೆ ಎಂದರೆ ಸರಿ.

2. ಆರೋಪಿತರನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತ ಘಟನಾ ದಿನದಂದು ಬಿಳಿ ಪೈಜಾಮಾ ಷರಾಯಿ ಧರಿಸಿದ್ದರು. 2 ನೇ ಆರೋಪಿತ ಪ್ಯಾಂಟು ಶರ್ಟು ಧರಿಸಿದ್ದರು, ಅದರ ಬಣ್ಣ ನನಗೆ ನೆನಪಿಲ್ಲ. 1 ಮತ್ತು 2 ನೇ ಆರೋಪಿತರ ಜೊತೆ ಇನ್ನಿಬ್ಬರು ಆರೋಪಿತರು ಇದ್ದರು.

ಕುಣಿಗಲ್ ಟೌನ್ ವ್ಯಾಪ್ತಿಯಲ್ಲಿ ಹಾರ್ನ್ ಮಾಡಬಾರದು ಎಂದು ನಿಯಮವಿದೆ ಎಂದರೆ ಸರಿ. ಇನ್ನಿಬ್ಬರು ಆರೋಪಿತರು ಸ್ಟೀಲ್ ಅಂಗಡಿಯ ಕಡೆ ಎಂದರೆ ಎಡಭಾಗದಿಂದ ಬಂದಿದ್ದರು. ಚಾಸಾ.1 ರವರು ಬಸ್ಸಿನಿಂದ ತಾವೇ ಕೆಳಗೆ ಇಳಿದು ಏಕೆ ಬೈಯುತ್ತೀರಾ ಎಂದು ಕೇಳಿದರು. ಚಾಸಾ.1 ರವರಿಗೆ ಹಲ್ಲೆ ಮಾಡಿಯಾದ ನಂತರ ಹೆಚ್ಚು ಜನ ಸೇರಿರುತ್ತಾರೆ. ಚಾಸಾ.1 ರವರಿಗೆ 4 ಜನ ಆರೋಪಿತರು ಹೊಡೆದಿರುತ್ತಾರೆ. ಆರೋಪಿತರು ಚಾಸಾ.1 ರವರಿಗೆ ಹಲ್ಲೆ ಮಾಡಿರುವುದಿಲ್ಲ, ಬೈದಿರುವುದಿಲ್ಲ ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕರ್ನಾಟಕ ಸ್ಟೀಲ್ ಅಂಗಡಿಯ ಬಳಿ ಯಾವುದೇ ಬಸ್ ನಿಲ್ದಾಣ ಇಲ್ಲದ ಕಾರಣ ಆರೋಪಿತರು ಯಾವುದೇ ಬಸ್ ನಿಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ.

3. ಚಾಸಾ.1 ರವರಿಗೆ ಹಲ್ಲೆಯಿಂದ ರಕ್ತ ಬಂದಿರಲಿಲ್ಲ. ನಾವು ಮೊದಲು ಆರೋಪಿತರನ್ನು ಠಾಣೆಗೆ ಬಿಟ್ಟು ಆಸ್ಪತ್ರೆಗೆ ಹೋಗಿದ್ದೆವು. ಗಲಾಟೆಯಾಗುತ್ತಿದ್ದ ಸಮಯಕ್ಕೆ ಬಸ್ಸಿನಲ್ಲಿದ್ದ ಉಳಿಕೆ ಪ್ರಯಾಣಿಕರು ಇಳಿದು ಹೋಗಿದ್ದರು. ಘಟನೆಯ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೂ ವಿಚಾರ ತಿಳಿಸಿದ್ದೆವು. ಅದರಂತೆ ನಾವು ದೂರು ನೀಡುವ ವೇಳೆಗೆ ನಮ್ಮ ಮೇಲಾಧಿಕಾರಿಗಳು ತುಮಕೂರಿನಿಂದ ಬಂದಿದ್ದರು. ನಮ್ಮ ಮೇಲಾಧಿಕಾರಿಗಳೂ ಸಹ ಘಟನೆಯ ಬಗ್ಗೆ ನಿವೇದನೆ ಸಲ್ಲಿಸಿದ್ದರು.

4. ಚಾಸಾ.1 ರವರು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಲಿಲ್ಲ. ಚಾಸಾ.1 ರವರು ಕುಣಿಗಲ್ ಸರ್ಕಾರಿ ಆಸ್ಪತ್ರೆಯಿಂದ ಮತ್ತೇ ಯಾವ ಆಸ್ಪತ್ರೆಗೆ ಹೋದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಘಟನಾ ದಿನವೇ ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದರು. ನಾನು ಹೇಳುವಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಚಾಸಾ.1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಎಂ ಎಂ ಬಸ್ಸನ್ನು ವಶಕ್ಕೆ ಪಡೆದಿದ್ದರೆ ಎಂದರೆ ಸಾಕ್ಷಿಯು ಅದನ್ನು ಆರೋಪಿತರು ಕಳುಹಿಸಿಬಿಟ್ಟಿದ್ದರು ಎಂದು ನುಡಿಯುತ್ತಾರೆ. ಆರೋಪಿತರು ಚಾಸಾ.1 ರವರಿಗೆ ಯಾವುದೇ ಹಲ್ಲೆ ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್